# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್‌ಭವನ, ಮೈಸೂರು
ದಿನಾಂಕ 10-07-2018

**ಸಂಖ್ಯೆ:ಯುಎ3/415/2017-2018**

ಶಿಕ್ಷಣ ಮಂಡಳಿ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ 19-06-2018ರಂದು ನಡೆದ ಶಿಕ್ಷಣ ಮಂಡಳಿಯ ನಾಲ್ಕನೇ ಸಾಮಾನ್ಯ ಸಭೆಯ ನಡಾವಳಿಯನ್ನು ಕಳುಹಿಸುವ ಬಗ್ಗೆ.

-:-:-

ದಿನಾಂಕ 19-06-2018 ರಂದು ಬೆಳಗ್ಗೆ 11.00 ಗಂಟೆಗೆ, ಕ್ರಾಫರ್ಡ್ ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ನಡೆದ, ಶಿಕ್ಷಣ ಮಂಡಳಿಯ ನಾಲ್ಕನೇ ಸಾಮಾನ್ಯ ಸಭೆಯ ನಡಾವಳಿಗಳ ಪ್ರತಿಯನ್ನು ತಮ್ಮ ಮಾಹಿತಿಗಾಗಿ ಈ ಮೂಲಕ ಕಳುಹಿಸಿಕೊಡಲಾಗಿದೆ. ನಡಾವಳಿಯಲ್ಲಿ ಹೇಳಿರುವ ಯಾವುದೇ ಅಂಶದ ಯಥಾರ್ಥತೆಯ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಂದ ನಡಾವಳಿಗಳನ್ನು ಕಳುಹಿಸಿದ ದಿನಾಂಕದಿಂದ 21 ದಿನಗಳ ಒಳಗಾಗಿ ಆಕ್ಷೇಪಣೆ ಬಾರದಿದ್ದಲ್ಲಿ, ನಡಾವಳಿಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸರಿಯಾಗಿವೆ ಎಂದು ಪರಿಗಣಿಸಲ್ಪಡುತ್ತವೆ. ಆದುದರಿಂದ, ನಡಾವಳಿಯ ಬಗ್ಗೆ ನಿಮ್ಮ ಆಕ್ಷೇಪಣೆ(ಗಳು) ಏನಾದರೂ ಇದ್ದಲ್ಲಿ, ಈ ಬಗ್ಗೆ "ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್‌ಭವನ, ಮೈಸೂರು" ಇವರನ್ನು ಉದ್ದೇಶಿಸಿ ಬರೆದ ಪತ್ರವನ್ನು ದಿನಾಂಕ 31-07-2018ರ ಒಳಗಾಗಿ, ವಿಶೇಷಾಧಿಕಾರಿಗಳು, ಸಿಂಡಿಕೇಟ್ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್‌ಭವನ, ಮೈಸೂರು-570005 ಇವರಿಗೆ ನೇರವಾಗಿ ತಲುಪಿಸುವಂತೆ ಕೋರಲಾಗಿದೆ.

ತಮ್ಮ ನಂಬುಗೆಯ

ವಿಶೇಷಾಧಿಕಾರಿಗಳು (ಪ್ರಾಧಿಕಾರ)

ಪ್ರತಿ:

1. ಘನತೆವೆತ್ತ ರಾಜ್ಯಪಾಲರ ಕಾರ್ಯದರ್ಶಿಯವರು, ರಾಜಭವನ, ಬೆಂಗಳೂರು- ಘನತೆವೆತ್ತ ರಾಜ್ಯಪಾಲರ ಅವಗಾಹನೆಗೆ ತರಬೇಕಾಗಿ ಕೋರಲಾಗಿದೆ.
2. ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ನಿರ್ದೇಶಕರು, ಪಿ.ಎಂ.ಇ.ಬಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು.
7. ಎಲ್ಲಾ ಉಪಕುಲಸಚಿವರು/ ಸಹಾಯಕ ಕುಲಸಚಿವರು(ಶೈಕ್ಷಣಿಕ/ಆಡಳಿತ/ಅಭಿವೃದ್ಧಿ/ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗಗಳ ವಿಶೇಷ ಘಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಕಛೇರಿ ಪ್ರತಿ.

AC forwarding letter

# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್‌ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ದಿನಾಂಕ: 19.06.2018 ರಂದು ಪೂರ್ವಾಹ್ನ 11–00 ಗಂಟೆಗೆ ನಡೆದ ಶಿಕ್ಷಣ ಮಂಡಳಿಯ ನಾಲ್ಕನೇ ಸಾಮಾನ್ಯ ಸಭೆಯ ನಡಾವಳಿಗಳು.**

<u>ಸಭೆಗೆ ಹಾಜರಾದ ಸದಸ್ಯರುಗಳು</u>

1. ಪ್ರೊ.ಟಿ.ಕೆ.ಉಮೇಶ್, ಕುಲಪತಿಗಳು (ಪ್ರ) ... ಅಧ್ಯಕ್ಷರು
2. ಜಂಟಿ ನಿರ್ದೇಶಕರು (ಆಯುಕ್ತರು, ಕಾಲೇಜು ಶಿಕ್ಷಣ, ಪರವಾಗಿ) .... ಸದಸ್ಯರು
3. ಶ್ರೀ ರಾಮಚಂದ್ರೇಗೌಡ, ವಿಧಾನ ಪರಿಷತ್ ಸದಸ್ಯರು ... ಸದಸ್ಯರು
4. ಶ್ರೀ.ಅಪ್ಪಾಜಿಗೌಡ, ವಿಧಾನ ಪರಿಷತ್ ಸದಸ್ಯರು ... ಸದಸ್ಯರು
5. ಡಾ.ಎಂ.ಸಿ.ನಟರಾಜ ... ಸದಸ್ಯರು
6. ಶ್ರೀ.ಜಿ.ಅಶ್ವತ್ಥ್ ನಾರಾಯಣ ... ಸದಸ್ಯರು
7. ಶ್ರೀಮತಿ ಎಂ.ಎನ್.ಪೊನ್ನಮ್ಮ ... ಸದಸ್ಯರು
8. ಶ್ರೀ.ಪುಷ್ಪಕುಮಾರ್.ಎಂ.ವಿ. ... ಸದಸ್ಯರು
9. ಶ್ರೀ.ಕುಮಾರ್ ... ಸದಸ್ಯರು
10. ಶ್ರೀ.ಬಿ.ಇ.ಜಗದೀಶ್ ... ಸದಸ್ಯರು
11. ಶ್ರೀ.ಕೆ.ಸೋಮಶೇಖರ್ ... ಸದಸ್ಯರು
12. ಡಾ.ರಾಜಗೋಪಾಲ್ ... ಸದಸ್ಯರು
13. ಪ್ರೊ.ಹೆಚ್.ಎಸ್.ಯತಿರಾಜನ್ ... ಸದಸ್ಯರು
14. ಪ್ರೊ.ಎಸ್.ಎಲ್.ಬೆಳಗಲಿ ... ಸದಸ್ಯರು
15. ಪ್ರೊ.ಆಯಿಷಾ ಎಂ ಶೆರೀಫ್ ... ಸದಸ್ಯರು
16. ಡಾ. ಎಸ್.ಮದಿ ಅಳಗನ್ ... ಸದಸ್ಯರು
17. ಶ್ರೀ ರಘು ಸಿ.ಎಸ್. ... ಸದಸ್ಯರು
18. ಶ್ರೀ ಬೆಳವಾಡಿ ಪ್ರಭಾಕರ್ ... ಸದಸ್ಯರು
19. ಡಾ.ಆರ್.ಟಿ.ಡಿ.ರಮೇಶ್‌ಗಾಂಧಿ, ಗ್ರಂಥಪಾಲಕರು ... ಸದಸ್ಯರು
20. ಪ್ರೊ.ಯಶವಂತಡೋಂಗ್ರೆ, ನಿರ್ದೇಶಕರು, ಪಿ.ಎಂ.ಇ.ಬಿ. ... ಸದಸ್ಯರು
21. ಡಾ.ಎಸ್.ಶ್ರೀಕಂಠಸ್ವಾಮಿ, ನಿರ್ದೇಶಕರು, ಸಿ.ಡಿ.ಸಿ. ... ಸದಸ್ಯರು
22. ಡಾ. ಕೆ.ಬಿ.ಪ್ರವೀಣ್, ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ... ಸದಸ್ಯರು
23. ಡಾ.ಪಿ.ಕೃಷ್ಣಯ್ಯ, ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ ... ಸದಸ್ಯರು
24. ಪ್ರೊ.ಜೆ.ಸೋಮಶೇಖರ್, ಕುಲಸಚಿವ (ಪರೀಕ್ಷಾಂಗ) ... ಸದಸ್ಯರು
25. ಪ್ರೊ.ಬಿ.ಮಹದೇವಪ್ಪ, ಹಣಕಾಸು ಅಧಿಕಾರಿಗಳು ... ಸದಸ್ಯರು
26. ಪ್ರೊ. ಆರ್. ರಾಜಣ್ಣ, ಕುಲಸಚಿವರು ...ಸದಸ್ಯ ಕಾರ್ಯದರ್ಶಿಗಳು

<u>ವಿಶೇಷ ಆಹ್ವಾನಿತರು</u>

27. ಪ್ರೊ.ಸಿ.ಬಸವರಾಜು
28. ಪ್ರೊ. ಮಹದೇವ

ಸಭೆಗೆ ಹಾಜರಾಗದವರು

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ
2. ಪ್ರೊ.ಬಿ.ಕೆ. ತುಳಸೀಮಾಲ
3. ಶ್ರೀ.ನಾಗೇಶ್ ಕರಿಯಪ್ಪ
4. ಶ್ರೀ.ಟಿ.ರಾಮಕೃಷ್ಣ
5. ಶ್ರೀ ಕೆ.ಟಿ.ಅಪ್ಪಾಜಪ್ಪ

ಮೊದಲಿಗೆ, ಮಾನ್ಯ ಕುಲಪತಿಗಳು, ಶಿಕ್ಷಣ ಮಂಡಳಿಯ ಎಲ್ಲಾ ಸದಸ್ಯರುಗಳನ್ನು ಹಾಗೂ ಪತ್ರಿಕಾ ಮಾಧ್ಯಮದವರನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ನಂತರ ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿಗಳಾಗಿ ಅಧಿಕಾರ ವಹಿಸಿಕೊಂಡಿರುವ ಪ್ರೊ.ಟಿ.ಕೆ.ಉಮೇಶ್‌ರವರನ್ನು ಸಭೆಗೆ ಸ್ವಾಗತಿಸಿ ಪರಿಚಯಿಸಿದರು.

ಆನಂತರ ಮಾನ್ಯ ಕುಲಪತಿಗಳು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾಗಿ ಅಧಿಕಾರ ವಹಿಸಿಕೊಂಡಿರುವ ಪ್ರೊ.ಆರ್.ರಾಜಣ್ಣ ಅವರನ್ನು ಸಭೆಗೆ ಸ್ವಾಗತಿಸಿ, ಪರಿಚಯಿಸಿದರು.

ಅದೇ ರೀತಿ ಶಿಕ್ಷಣ ಮಂಡಳಿಗೆ ನಾಮನಿರ್ದೇಶನಗೊಂಡಿರುವ ಈ ಕೆಳಕಂಡ ಸದಸ್ಯರು/ವಿಶೇಷ ಆಹ್ವಾನಿತರುಗಳನ್ನು ಸಭೆಗೆ ಪರಿಚಯಿಸಿ, ಅವರನ್ನೂ ಸಹ ಸಭೆಗೆ ಸ್ವಾಗತಿಸಲಾಯಿತು.

1. ಪ್ರೊ.ಹೆಚ್.ಎಸ್.ಯತಿರಾಜನ್, ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
2. ಪ್ರೊ ಮಹದೇವ, ಡೀನರು ಕಲಾ ನಿಕಾಯ
3. ಡಾ. ಎಸ್.ಮದಿ ಅಳಗನ್, ಡೀನರು, ಶಿಕ್ಷಣ ನಿಕಾಯ
4. ಡಾ. ಕೆ.ಬಿ.ಪ್ರವೀಣ್, ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನ

ಹಾಗೂ ಇದುವರೆವಿಗೂ ಶಿಕ್ಷಣ ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸಿರುವ ಈ ಕೆಳಕಂಡವರ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

1. ಶ್ರೀಮತಿ ಡಿ.ಭಾರತಿ ಕೆ.ಎ.ಎಸ್, ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾಗಿ
2. ಪ್ರೊ.ಸಿ.ಬಸವರಾಜು, ಕಾನೂನು ನಿಕಾಯದ ಡೀನರಾಗಿ ಹಾಗೂ ಪ್ರಭಾರ ಕುಲಪತಿಗಳಾಗಿ
3. ಡಾ. ನಿಂಗಮ್ಮ ಬೆಟ್ಸೂರ್, ಶಿಕ್ಷಣ ನಿಕಾಯದ ಡೀನರಾಗಿ ಹಾಗೂ ಪ್ರಭಾರ ಕುಲಪತಿಗಳಾಗಿ
4. ಪ್ರೊ ಎನ್. ಉಷಾರಾಣಿ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
5. ಪ್ರೊ.ಜಿ.ವೆಂಕಟೇಶ್ ಕುಮಾರ್, ಮನ:ಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
6. ಡಾ. ಸುರೇಶ್ ಬೆಂಜಮಿನ್, ವಿದ್ಯಾರ್ಥಿ ಕ್ಷೇಮ ಪಾಲನಾ ನಿರ್ದೇಶಕರಾಗಿ

ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತು.

**I ಹಿಂದಿನ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ.**

**I.1** ದಿನಾಂಕ 07.02.2018ರಂದು ನಡೆದ ಶಿಕ್ಷಣ ಮಂಡಳಿಯ ಮೂರನೇ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಬಗ್ಗೆ.

**ತೀರ್ಮಾನ**: ದೃಢೀಕರಿಸಲಾಯಿತು

**II.1** ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜಿತ ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿಗೆ ಹೊಸದಾಗಿ ಸ್ವಾಯತ್ತತಾ ಸ್ಥಾನವನ್ನು ನೀಡುವ ಬಗ್ಗೆ.

**ತೀರ್ಮಾನ**: ಅನುಮೋದಿಸಲಾಯಿತು

**II.2** 2017–18ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬನ್ನಿಮಂಟಪದಲ್ಲಿರುವ ಸೆಂಟ್ ಫಿಲೋಮಿನಾಸ್ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗ್ಗೆ

**ತೀರ್ಮಾನ**: ಅನುಮೋದಿಸಲಾಯಿತು

**II.3** ಬಿ.ಇಡಿ ಕಾಲೇಜುಗಳಿಗೆ MAAC ಸಮಿತಿ ರಚನೆ ಹಾಗೂ ಜೇಷ್ಠತಾ ಪಟ್ಟಿ ಸಿದ್ಧಪಡಿಸುವ ಬಗ್ಗೆ.

**ತೀರ್ಮಾನ**: ಪ್ರಸ್ತಾವನೆಯ ಬಗ್ಗೆ ಮುಂದೆ ಪರಿಶೀಲಿಸಿ ಕ್ರಮ ಕೈಗೊಳ್ಳುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಭೆಯು ತೀರ್ಮಾನಿಸಿತು.

**II.4** ಪಿಹೆಚ್.ಡಿ ನಿಯಮಾವಳಿ 2017ರ ತಿದ್ದುಪಡಿ ಬಗೆಗೆ.

**ತೀರ್ಮಾನ**: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ನಿರ್ದೇಶನದಂತೆ ಮತ್ತು ಪಿ.ಹೆಚ್‌ಡಿ ವಿನಿಯಮ ಸಿದ್ಧಪಡಿಸಲು ರಚಿಸಿದ್ದ ಸಮಿತಿಯ ಶಿಫಾರಸ್ಸಿನಂತೆ ವಿಶ್ವವಿದ್ಯಾನಿಲಯವು ತಿದ್ದುಪಡಿ ಮಾಡಿ ಹೊರಡಿಸಿದ್ದ ಪಿ.ಹೆಚ್‌ಡಿ ವಿನಿಯಮಾವಳಿ 2017ಕ್ಕೆ ಶೈಕ್ಷಣಿಕ ಮಂಡಳಿಯು ಅನುಸಮರ್ಥನೆ ನೀಡಿ, ತಿದ್ದುಪಡಿ ವಿನಿಯಮಕ್ಕೆ ಸರ್ಕಾರದ ಅನುಮೋದನೆ ಪಡೆಯಲು ಸಮ್ಮತಿಸಿತು.

**II.5** 2018–19ನೇ ಶೈಕ್ಷಣಿಕ ವರ್ಷಕ್ಕೆ ಸ್ಥಳೀಯ ತನಿಖಾ ಸಮಿತಿಯು ನೀಡಿರುವ ಸಂಯೋಜನಾ ವರದಿಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗೆಗೆ.

ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಇವರು 2018–19ನೇ ಶೈಕ್ಷಣಿಕ ವರ್ಷಕ್ಕೆ ಸ್ಥಳೀಯ ತನಿಖಾ ಸಮಿತಿಯು ನೀಡಿರುವ ಸಂಯೋಜನಾ ವರದಿಗಳನ್ನು ಸಭೆಯ ಮುಂದೆ ವಿಸ್ತೃತಪಡಿಸಿದರು.

ತೀರ್ಮಾನ: 2018–19ನೇ ಶೈಕ್ಷಣಿಕ ಸಾಲಿಗೆ ಹಾಲಿ ಅಸ್ತಿತ್ವದಲ್ಲಿರುವ ಪ್ರಥಮ ದರ್ಜೆ ಕಾಲೇಜುಗಳಿಗೆ ಸಂಯೋಜನೆ ಮುಂದುವರಿಸಲು/ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸ ಕೋರ್ಸುಗಳು/ವಿಷಯಗಳು/ ಕಾಂಬಿನೇಷನ್‌ಗಳನ್ನು ಪ್ರಾರಂಭಿಸಲು/ ನವೀಕರಿಸಲು ಹಾಗೂ ಹಾಲಿ ಇರುವ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಶಾಶ್ವತ ಸಂಯೋಜನೆ ಕೋರಿರುವ ಕೋರ್ಸುಗಳಿಗೆ ಹೊಸದಾಗಿ ಶಾಶ್ವತ ಸಂಯೋಜನೆ ನೀಡಲು / ಶಿಕ್ಷಣ ಕಾಲೇಜುಗಳಿಗೆ ಸಂಯೋಜನೆ ಮುಂದುವರೆಸಲು / ಹೊಸ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು, ಹಾಲಿ ಇರುವ ಕಾಲೇಜುಗಳಲ್ಲಿ ಅಸ್ತಿತ್ವದಲ್ಲಿರುವ ಸ್ನಾತಕೋತ್ತರ ಕೋರ್ಸುಗಳಿಗೆ ಸಂಯೋಜನೆ ಮುಂದುವರೆಸಲು, ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು ಮತ್ತು ಯು.ಜಿ.ಸಿ. ಆ್ಯಡ್ ಆನ್ ಕೋರ್ಸುಗಳನ್ನು ಮುಂದುವರಿಸಲು / ಹೊಸದಾಗಿ ಸಂಯೋಜನೆ ನೀಡಲು / ಹಾಲಿ ಅಸ್ತಿತ್ವದಲ್ಲಿರುವ ಕೋರ್ಸುಗಳಿಗೆ ಪ್ರವೇಶಾತಿ ಸಂಖ್ಯೆಯನ್ನು ಹೆಚ್ಚಿಸುವ ಬಗೆಗೆ ಸ್ಥಳೀಯ ವಿಚಾರಣಾ ಸಮಿತಿಯವರು ಸಲ್ಲಿಸಿರುವ ವರದಿಗಳನ್ನು ವಿದ್ಯಾ ವಿಷಯಕ ಪರಿಷತ್ ಸಭೆಯು ಅನುಮೋದಿಸಿತು.

**II.6** ಮೈಸೂರಿನ ಕ್ರಿಸ್ತ ಪ್ರಥಮ ದರ್ಜೆ ಕಾಲೇಜನ್ನು ಪ್ರಸ್ತುತ ಕಟ್ಟಡದಿಂದ ನೂತನ ಕಟ್ಟಡಕ್ಕೆ ಬದಲಾವಣೆ ಮಾಡಲು ಸಮಿತಿ ಪರಿಶೀಲನೆ ನಡೆಸಿ ಸಲ್ಲಿಸಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅವಗಾಹನೆಗೆ ತಂದು ಅನುಮೋದನೆ ಪಡೆಯುವ ಬಗ್ಗೆ.

ತೀರ್ಮಾನ: ಅನುಮೋದಿಸಲಾಯಿತು

**II.7** ಬಿ.ಜಿ.ಎಸ್. ಶಿಕ್ಷಣ ಮಹಾವಿದ್ಯಾಲಯ, ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾಲೂಕು, ಮಂಡ್ಯ ಜಿಲ್ಲೆ – ಈ ಶಿಕ್ಷಣ ಕಾಲೇಜನ್ನು 2018–19ನೇ ಶೈಕ್ಷಣಿಕ ಸಾಲಿನಿಂದ ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಸುಪರ್ಧಿಗೆ ಹಸ್ತಾಂತರ ಮಾಡುವುದರ ಬಗ್ಗೆ.

ತೀರ್ಮಾನ: ಅನುಮೋದಿಸಲಾಯಿತು

**II.8** Adichunchanagiri Institute for Molecular Medicine, B.G. Nagar, Nagamangala, Mandya ಸಂಸ್ಥೆಯ ಸಂಶೋಧನ ಕೇಂದ್ರದ ಮಾನ್ಯತೆಯನ್ನು ಸ್ಥಗಿತಗೊಳಿಸುವ ಬಗೆಗೆ.

ತೀರ್ಮಾನ: ಅನುಮೋದಿಸಲಾಯಿತು

**II.9** ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜಿತ ಮೈಸೂರಿನ ಎಸ್.ಬಿ.ಆರ್.ಆರ್.ಮಹಾಜನ ಪ್ರಥಮ ದರ್ಜೆ ಕಾಲೇಜಿಗೆ ಹೊಸದಾಗಿ ಸ್ವಾಯತ್ತತಾ ಸ್ಥಾನಮಾನ ನೀಡುವ ಬಗೆಗೆ.

<u>ತೀರ್ಮಾನ</u>: ಅನುಮೋದಿಸಲಾಯಿತು

**II.10** 2018–19ನೇ ಸಾಲಿನ ಕರಡು ಆಯವ್ಯಯ ಅಂದಾಜುಗಳು

ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ವಿಶ್ವವಿದ್ಯಾನಿಲಯದ 2018–19ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಸಭೆಯ ಮುಂದೆ ಮಂಡಿಸಿದರು.

<u>ತೀರ್ಮಾನ</u>: 2018–19ನೇ ಸಾಲಿನ ಕರಡು ಆಯವ್ಯಯ ಅಂದಾಜುಗಳನ್ನು ಅನುಮೋದಿಸಲಾಯಿತು ಹಾಗೂ ಐ.ಐ.ಡಿ.ಎಫ್. ಬ್ಯಾಂಕ್ ಖಾತೆಯನ್ನು ಹೊರತುಪಡಿಸಿ, ಉಳಿದ ಹತ್ತು ಬ್ಯಾಂಕ್ ಖಾತೆಗಳನ್ನು ಮುಕ್ತಾಯಗೊಳಿಸಿ, ಬೇರೆ ಬ್ಯಾಂಕ್ ಖಾತೆಗಳಿಗೆ ಸೇರ್ಪಡಿಸಲು ಅನುಮೋದಿಸಲಾಯಿತು.

**II.11** 2017–18ನೇ ಸಾಲಿನ ಆಯವ್ಯವಯ ಅಂದಾಜುಗಳ ವೆಚ್ಚ ಶೀರ್ಷಿಕೆಗಳಲ್ಲಿ ಮರು ಹೊಂದಾಣಿಕೆ (Re-appropriation) ಬಗ್ಗೆ.

ತೀರ್ಮಾನ: ಅನುಮೋದಿಸಲಾಯಿತು.

**II.12** Enquiry conducted against 23 delinquent students as per the directions of the Hon'ble High Court-Enquiry Report sent to concerned students for their reply- Action to be taken there of-reg.

<u>ತೀರ್ಮಾನ</u>: ವಿಚಾರಣಾ ವರದಿಯನ್ನು ಒಪ್ಪಿ, ಸದರಿ ವಿದ್ಯಾರ್ಥಿಗಳ ಪದವಿಯನ್ನು ಹಿಂಪಡೆಯಲು ಮುಂದಿನ ಅಗತ್ಯ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.

**II.13** ವ್ಯಾಸಂಗದ ಎರಡು ಪಟ್ಟು ಅವಧಿಯೊಳಗಾಗಿ ಅನುತ್ತೀರ್ಣರಾದಂತಹ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಮತ್ತೊಂದು ಅವಕಾಶ ನೀಡುವ ಬಗೆಗೆ.

<u>ತೀರ್ಮಾನ</u>: ವಿಶ್ವವಿದ್ಯಾನಿಲಯದಲ್ಲಿ 2018–19ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕ ಕೋರ್ಸುಗಳಿಗೆ ಸಿಬಿಸಿಎಸ್ ಪದ್ಧತಿಯನ್ನು ಅಳವಡಿಸುತ್ತಿರುವುದರಿಂದ, ಎರಡು ಪಟ್ಟು ಅವಧಿಯಲ್ಲಿಯೂ ಕೋರ್ಸನ್ನು ಪೂರ್ಣಗೊಳಿಸಿಕೊಳ್ಳದ/ಅನುತ್ತೀರ್ಣರಾದಂತಹ ವಿದ್ಯಾರ್ಥಿಗಳಿಗೆ ಮತ್ತು ವಿಶ್ವವಿದ್ಯಾನಿಲಯದಲ್ಲಿ ಜಾರಿಯಲ್ಲಿರುವ ಇತರ ಎಲ್ಲಾ ಕೋರ್ಸುಗಳಲ್ಲಿ ಅನುತ್ತೀರ್ಣರಾದಂತಹ ವಿದ್ಯಾರ್ಥಿಗಳಿಗೂ ಅನ್ವಯವಾಗುವಂತೆ (ವಾರ್ಷಿಕ ಪರೀಕ್ಷಾ ಪದ್ಧತಿ ಆಗಿರಬಹುದು ಅಥವಾ ಸೆಮಿಸ್ಟರ್ ಪದ್ಧತಿ ಆಗಿರಬಹುದು, ಎಲ್ಲದಕ್ಕೂ ಅನ್ವಯವಾಗುವಂತೆ)

ಹಳೆಯ ಪಠ್ಯಕ್ರಮದಂತೆಯೇ (ವಿದ್ಯಾರ್ಥಿ ಹಿಂದೆ ವ್ಯಾಸಂಗ ಮಾಡಿದ್ದ ಸ್ಕೀಂ ಮತ್ತು ಅಭ್ಯಸಿಸಿದ್ದ ಪಠ್ಯಕ್ರಮಕ್ಕನುಗುಣವಾಗಿ) ಪರೀಕ್ಷೆ ತೆಗೆದುಕೊಳ್ಳಲು ಅಂತಿಮವಾಗಿ ಒಂದು ಕಡೇ ಅವಕಾಶವನ್ನು ನೀಡಲು ಸಭೆಯು ನಿರ್ಣಯಿಸಿ, ಈ ಸಂಬಂಧ ಕೂಡಲೇ ಪರೀಕ್ಷೆ ನಡೆಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿ, ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**II.14** ಒಂದು ವರ್ಷದ M.ED, SPL.Ed (HI) ಕೋರ್ಸಿನ ವ್ಯಾಸಂಗವನ್ನು ಎರಡು ವರ್ಷಗಳಿಗೆ ವಿಸ್ತರಿಸಿರುವ ಸಂಬಂಧ ವಿನಿಯಮಾವಳಿಗೆ ಅನುಮೋದನೆ ಪಡೆಯುವ ಬಗೆಗೆ.

**ತೀರ್ಮಾನ:** ಒಂದು ವರ್ಷದ M.ED, SPL.Ed (HI) ಕೋರ್ಸಿನ ವ್ಯಾಸಂಗವನ್ನು ಎರಡು ವರ್ಷಗಳಿಗೆ ವಿಸ್ತರಿಸಿರುವ ವಿನಿಯಮಾವಳಿಗೆ ಸಂಬಂಧಿಸಿದಂತೆ, ಹೊಸದಾಗಿ ನಿಗದಿತ ನಮೂನೆಯಲ್ಲಿ ಮಂಡಿಸಿರುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**II.15** 2018–19ನೇ ಶೈಕ್ಷಣಿಕ ಸಾಲಿನಿಂದ ಎಲ್ಲಾ ಸ್ನಾತಕ ವಿಷಯಗಳಲ್ಲಿ CBCS-CAGP ಪದ್ಧತಿಯನ್ನು ಅಳವಡಿಸಿಕೊಳ್ಳುವ ಬಗೆಗೆ.

**ತೀರ್ಮಾನ:** ಕೆಳಗಿನ ಮಾರ್ಪಾಡುಗಳೊಂದಿಗೆ, ವಿಶ್ವವಿದ್ಯಾನಿಲಯದಲ್ಲಿ 2018–19ನೇ ಶೈಕ್ಷಣಿಕ ಸಾಲಿನಿಂದ ಎಲ್ಲಾ ಸ್ನಾತಕ ವಿಷಯಗಳಲ್ಲಿ CBCS-CAGP ಪದ್ಧತಿಯನ್ನು ಅಳವಡಿಸಿಕೊಳ್ಳಲು ತೀರ್ಮಾನಿಸಲಾಯಿತು;

1. In the CBCS and CAGP Regulations 2018 at point No.10. Attendance - sub clause, 10.2 The Head of the Department shall notify the list of all students who have less than 75% attendance in each course by the beginning of the 16th week" be deleted and substituted by "The Head of the Department shall notify the list of all students who have less than 75% attendance in each course be announced in the 8th week and also in 16th week.

2. The credits for Environmental Studies/Constitution of India are 3 instead of 2.

**II.16** ಸ್ನಾತಕೋತ್ತರ ಕೋರ್ಸುಗಳಲ್ಲಿ Massive Open online Course (MOOCs) SWAYAM ನ್ನು ಅಳವಡಿಸುವ ಬಗೆಗೆ.

<u>ತೀರ್ಮಾನ</u>: 2018-19ನೇ ಶೈಕ್ಷಣಿಕ ಸಾಲಿನಿಂದ ಯು.ಜಿ.ಸಿ. Massive Open online Course (MOOCs) SWAYAM ಕೋರ್ಸುಗಳನ್ನು ಅಳವಡಿಸುವ ಸಂಬಂಧ ಅಧಿಸೂಚನೆ ಹೊರಡಿಸಿರುವ ಕ್ರಮವನ್ನು ಅನುಸಮರ್ಥಿಸಲಾಯಿತು ಹಾಗೂ ಹಾಲಿಯಿರುವ PG CBCS-CAGP ವಿನಿಯಮಾವಳಿಗೆ ತಿದ್ದುಪಡಿ ಮಾಡಲು ಸಭೆಯು ಅನುಮೋದಿಸಿತು.

**II.17** ದಿನಾಂಕ: 17.04.2018 ರಂದು ನಡೆದ ಕಾನೂನು ನಿಕಾಯ ಸಭೆಯ ತೀರ್ಮಾನದ ಅನುಮೋದನೆಗಾಗಿ ಬಗೆಗೆ.

<u>ತೀರ್ಮಾನ</u>: ಅನುಮೋದಿಸಲಾಯಿತು.

**II.18** Lifelong distinguished Professor ಅಧಿನಿಯಮಕ್ಕೆ ಸೂಕ್ತ ತಿದ್ದುಪಡಿ ಮಾಡಿ ಸಲ್ಲಿಸಿರುವ ಅಧಿನಿಯಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಯನ್ನು ಕೋರಿರುವ ಬಗ್ಗೆ.

<u>ತೀರ್ಮಾನ</u>: ಸದರಿ ಅಧಿನಿಯಮದ **clause III. Selection** ಶೀರ್ಷಿಕೆಯ **para No.7** (Individuals below the age of 62, those individuals engaged in political activities as member of political parties and those gainfully employed in the University or any other Institution shall not be considered for appointment as Distinguished Professors. of the Life Long Distinguished Professor) ಅನ್ನು ತೆಗೆದುಹಾಕುವಂತೆ ತೀರ್ಮಾನಿಸಿ, ಉಳಿದಂತೆ Lifelong distinguished Professor ಅಧಿನಿಯಮಕ್ಕೆ ಸೂಕ್ತ ತಿದ್ದುಪಡಿ ಮಾಡಿ ಸಲ್ಲಿಸಿರುವ ಅಧಿನಿಯಮವನ್ನು ಸಭೆಯು ಅನುಮೋದಿಸಿತು.

**II.19** ದಿನಾಂಕ: 21.04.2018ರಂದು ನಡೆದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಸಭೆಯ ನಡಾವಳಿಯ ಅನುಮೋದನೆಗಾಗಿ.

ಮಹಾರಾಜ ಕಾಲೇಜಿನಲ್ಲಿ ಎಂ.ಎಸ್ಸಿ. ಭೂಗೋಳಶಾಸ್ತ್ರ ಕೋರ್ಸನ್ನು ಪ್ರಾರಂಭಿಸುವಂತೆ ಕೆಲವು ಸದಸ್ಯರು ಒತ್ತಾಯಿಸಿದರು.

<u>ತೀರ್ಮಾನ</u>: ಈ ಬಗ್ಗೆ ಚರ್ಚಿಸಿದ ಸಭೆಯು, ಮಹಾರಾಜ ಕಾಲೇಜಿನಲ್ಲಿ ಎಂ.ಎಸ್ಸಿ. ಭೂಗೋಳಶಾಸ್ತ್ರ ಕೋರ್ಸನ್ನು ಪ್ರಾರಂಭಿಸುವ ಪ್ರಸ್ತಾವನೆಯನ್ನು ವಿಜ್ಞಾನ & ತಂತ್ರಜ್ಞಾನ ನಿಕಾಯ ಸಭೆಯು ಕೈಬಿಟ್ಟಿರುವುದರಿಂದ ಹಾಗೂ ಈಗಾಗಲೇ ಸ್ನಾತಕೋತ್ತರ ಕೋರ್ಸುಗಳಿಗೆ ಪ್ರವೇಶ ಪರೀಕ್ಷೆಗಳು ನಡೆಯುತ್ತಿರುವುದರಿಂದ ಮತ್ತು ಹೊಸ ಕೋರ್ಸನ್ನು ಪ್ರಾರಂಭಿಸಲು ಅಲ್ಲಿ ಲಭ್ಯವಿರುವ ಮೂಲಭೂತ ಸೌಕರ್ಯಗಳನ್ನು ಸಮಿತಿಯು ಪರಿಶೀಲಿಸಬೇಕಾಗಿರುವುದರಿಂದ, ಮಾನ್ಯ ಕುಲಪತಿಗಳು ಸಮಿತಿಯನ್ನು ರಚಿಸಿ, ಪರಾಮರ್ಶನೆಗೆ ಕಳುಹಿಸುವಂತೆ ನಿರ್ಧರಿಸಿ, ಉಳಿದಂತೆ, ದಿನಾಂಕ: 21.04.2018ರಂದು ನಡೆದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಸಭೆಯ ನಡಾವಳಿಯನ್ನು ಅನುಮೋದಿಸಲಾಯಿತು.

**II.20** "ವಿಕಲಚೇತನ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016"ರ ಕಲಂ 37 ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯವು W.P.(Civil)No.292/2016 & 997/2013ರಲ್ಲಿ ನೀಡಿರುವ ತೀರ್ಪನ್ನು ಅನುಷ್ಠಾನಗೊಳಿಸುವ ಬಗ್ಗೆ.

ತೀರ್ಮಾನ: ಪ್ರಸ್ತಾವನೆಯನ್ನು ಪರಿಶೀಲಿಸಿದ ಸಭೆಯು, ಎಲ್ಲಾ ಸರ್ಕಾರಿ ಮತ್ತು ಸರ್ಕಾರದ ದೇಣಿಗೆ ಪಡೆಯುತ್ತಿರುವ ಉನ್ನತ ಶಿಕ್ಷಣ ಸಂಸ್ಥೆಗಳು ನಿರ್ದಿಷ್ಟ ಮಾನದಂಡ ಅಂಗವಿಕಲತೆ ಇರುವವರಿಗೆ (Benchmark Disability) ಕನಿಷ್ಟ ಶೇ. 5 ರಷ್ಟು ಸ್ಥಾನಗಳನ್ನು (Seats) ಮೀಸಲಿಡಲು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ನಿರ್ದಿಷ್ಟ ಮಾನದಂಡದ ಅಂಗವಿಕಲತೆ ಇರುವವರಿಗೆ (Benchmark Disability) ಪ್ರವೇಶದ ವಯೋಮಿತಿಯಲ್ಲಿ ಐದು ವರ್ಷಗಳ ರಿಯಾಯಿತಿ ನೀಡಲು ತೀರ್ಮಾನಿಸಿತು.

**II.21** **Specialized** ಕೋರ್ಸುಗಳ ವಿಷಯದ ನಿಕಾಯಗಳ ಶಿಫಾರಸ್ಸು ನಿರ್ಣಯಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಗೆ ಮಂಡಿಸುತ್ತಿರುವ ಬಗ್ಗೆ.

ತೀರ್ಮಾನ: ಪ್ರಸ್ತಾವನೆಯಲ್ಲಿನ ಎರಡೂ ಅಂಶಗಳ ಶಿಫಾರಸುಗಳನ್ನು ಅನುಮೋದಿಸಲಾಯಿತು

**II.22** ವಾಣಿಜ್ಯ ನಿಕಾಯ ಸಭೆಯ ಶಿಫಾರಸ್ಸುಗಳ ಬಗೆಗೆ.

ತೀರ್ಮಾನ: ಅನುಮೋದಿಸಲಾಯಿತು.

**II.23** ದಿನಾಂಕ: 21.04.2018 ರಂದು ನಡೆದ ಕಲಾ ನಿಕಾಯ ಸಭೆಯ ನಡಾವಳಿಯ ಅನುಮೋದನೆಗಾಗಿ.

ತೀರ್ಮಾನ: ಅನುಮೋದಿಸಲಾಯಿತು.

**II.24** ಶಿಕ್ಷಣ ನಿಕಾಯದ ಸಭೆಯ ತೀರ್ಮಾನದ ಅನುಮೋದನೆ ಬಗ್ಗೆ.

ತೀರ್ಮಾನ: ಅನುಮೋದಿಸಲಾಯಿತು.

**II.25** 'ಪರಿಸರ ವಿಜ್ಞಾನ ವಿಷಯದ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕುರಿತು' ಪ್ರೊ.ಎಸ್.ಎಲ್.ಬೆಳಗಲಿ ಅವರು ಸಲ್ಲಿಸಿರುವ ಆಕ್ಷೇಪಣೆಯ ಬಗೆಗೆ.

ತೀರ್ಮಾನ: ಈ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ ಸಭೆಯು, ಪರಿಸರ ವಿಜ್ಞಾನ ವಿಷಯದ ಉತ್ತರ ಪತ್ರಿಕೆಗಳ ಬೋಧನಾ ಹಾಗೂ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ, ಹಿಂದಿನ ಸಭೆಯ ನಡಾವಳಿಗಳಲ್ಲಿ ದಾಖಲಾಗಿದ್ದ 'ಇದೇ ವಿಷಯಗಳಲ್ಲಿ' ಎಂಬುದರ ಬದಲಾಗಿ 'ಮುಂದಿನ ವಿಷಯಗಳಾದ' ಎಂದು ಸರಿಪಡಿಸಿಕೊಳ್ಳುವಂತೆ ತೀರ್ಮಾನಿಸಿತು. ಜೊತೆಗೆ, ಒಂದು ವೇಳೆ ಅರ್ಹ ಅಧ್ಯಾಪಕರು ಲಭ್ಯವಿಲ್ಲದಿದ್ದಲ್ಲಿ ವಿಶ್ವವಿದ್ಯಾನಿಲಯವನ್ನು ಸಂಪರ್ಕಿಸುವಂತೆಯೂ ತೀರ್ಮಾನಿಸಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯ:

1. ಶ್ರೀ.ಅಪ್ಪಾಜಿಗೌಡ, ಮಾನ್ಯ ವಿಧಾನ ಪರಿಷತ್ ಸದಸ್ಯರು, ಇವರು ಮಹಾರಾಣಿ ವಿಜ್ಞಾನ ಕಾಲೇಜಿನಲ್ಲಿ ಎಂ.ಕಾಂ ವಿದ್ಯಾರ್ಹತೆಯುಳ್ಳವರನ್ನು ಪ್ರಾಂಶುಪಾಲರನ್ನಾಗಿ ನೇಮಿಸಿರುವುದರ ಬಗ್ಗೆ ಮಾತನಾಡಿದರು. ಪ್ರೊ.ಸಿ.ಬಸವರಾಜುರವರು ಮಾತನಾಡಿ, ಎಷ್ಟೋ ಕಾಲೇಜುಗಳಲ್ಲಿ ಖಾಯಂ ಪ್ರಾಂಶುಪಾಲರುಗಳೇ ಇರುವುದಿಲ್ಲ; ನಿಗಧಿತ ವಿದ್ಯಾರ್ಹತೆ ಇಲ್ಲದವರನ್ನೂ ಕೆಲ ಕಾಲೇಜುಗಳಲ್ಲಿ ಪ್ರಾಂಶುಪಾಲರಾಗಿ ನೇಮಿಸಲಾಗಿದೆ, ನೇಮಕಾತಿಗಳಲ್ಲಿ ಮೀಸಲಾತಿ ಮತ್ತು ರೋಸ್ಟರ್ ನಿಯಮಗಳನ್ನು ಸರಿಯಾಗಿ ಪಾಲಿಸಿರುವುದಿಲ್ಲ; ವಿಶ್ವವಿದ್ಯಾನಿಲಯದ ನಿಯಮಗಳನ್ನು ಉಲ್ಲಂಘಿಸಿರುವ ಕಾಲೇಜುಗಳಿಗೆ ಹಾಗೂ ಮೂಲಭೂತ ಸೌಕರ್ಯಗಳ ಕೊರತೆ ಇರುವ ಕಾಲೇಜುಗಳಿಗೆ ಸಂಯೋಜನೆಯನ್ನು ನೀಡಬಾರದು ಎಂದರು. ಪ್ರೊ. ಮಹದೇವ, ಕಲಾ ನಿಕಾಯದ ಡೀನರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಮಾತನಾಡಿ ಸೇವಾ ಹಿರಿತನದ ಮೇಲೆ ಪ್ರಾಂಶುಪಾಲರ ಹುದ್ದೆಯನ್ನು ನೀಡಬೇಕು ಹಾಗೂ ರೋಸ್ಟರ್ ಪದ್ಧತಿಯನ್ನು ಅನುಸರಿಸಬೇಕು ಎಂದರು.
2. ಸಭೆಯು ವಿವಿಧ ಕೋರ್ಸುಗಳ ಪ್ರವೇಶಾತಿಗೆ ಸಂಬಂಧಿಸಿದಂತೆ 'ಬಿ'ಸ್ಕೀಂನ ಬಗ್ಗೆ ಪ್ರಸ್ತಾಪಿಸಿದಾಗ, ಕೆಲವು ಸದಸ್ಯರು 'ಬಿ' ಸ್ಕೀಂ ಅನ್ನು ತೆಗೆದು, 'ಎ' ಸ್ಕೀಂ ನಲ್ಲಿಯೇ ಹೆಚ್ಚುವರಿಯಾಗಿ ಪ್ರವೇಶಾತಿ ಮಾಡಿಕೊಳ್ಳುವಂತೆ ಅಭಿಪ್ರಯಿಸಿದರು. ಕೆಲವು ಸದಸ್ಯರುಗಳು ಶುಲ್ಕ ಕಡಿಮೆ ಮಾಡುವಂತೆ ಕೋರಿದರು. ಮಾನ್ಯ ಕುಲಪತಿಗಳು, ಈ ಬಗ್ಗೆ ಎಲ್ಲಾ ಡೀನರುಗಳ ಸಮಿತಿಯ ಮುಂದೆ ಚರ್ಚಿಸಿ, ತದನಂತರ ಫೀ ಸ್ಟ್ರಕ್ಚರ್ ಸಮಿತಿಯ ಮುಂದೆ ಮಂಡಿಸುವುದಾಗಿ ತಿಳಿಸಿದಾಗ, ಸಭೆಯು ಒಪ್ಪಿಗೆ ಸೂಚಿಸಿತು.
3. ಶ್ರೀ ರಾಮಚಂದ್ರಗೌಡ, ಮಾನ್ಯ ವಿಧಾನ ಪರಿಷತ್ ಸದಸ್ಯರು, ಇವರು ಮಾತನಾಡುತ್ತಾ, ಇದೊಂದು ಅತ್ಯುನ್ನತ ಪ್ರಾಧಿಕಾರವಾಗಿದ್ದು, ಇಲ್ಲಿಯ ವಿಚಾರಧಾರೆಗಳು ಶ್ರೇಷ್ಠವಾಗಿದ್ದು, ಎಲ್ಲರೂ ಅತ್ಯಮೂಲ್ಯ ಸಲಹೆ–ಸಹಕಾರಗಳನ್ನು ನೀಡುವುದರ ಮೂಲಕ ಒಳ್ಳೊಳ್ಳೆ ತೀರ್ಮಾನಗಳನ್ನು ಕೈಗೊಳ್ಳಲಾಗಿದೆ. ತಮ್ಮ ಸದಸ್ಯತ್ವವು ಇದೇ ತಿಂಗಳು ಅಂತ್ಯಗೊಳ್ಳುತ್ತಿದ್ದು, ಇದೇ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಿದ ತಮಗೆ ಇಲ್ಲಿಯ ಪ್ರಾಧಿಕಾರದ ಸದಸ್ಯರಾಗಿ

ಸೇವೆ ಸಲ್ಲಿಸಲು ಅವಕಾಶ ಲಭಿಸಿದ್ದಕ್ಕೆ ಹರ್ಷ ವ್ಯಕ್ತಪಡಿಸುತ್ತಾ, ಎಲ್ಲರಿಗೂ ಕೃತಜ್ಞತೆಗಳನ್ನು ಅರ್ಪಿಸಿದರು. ಸಭೆಯೂ ಕೂಡ ಮಾನ್ಯರಿಗೆ ಶುಭ ಹಾರೈಸಿ, ಅವರನ್ನು ಸನ್ಮಾನಿಸಿ ಬೀಳ್ಕೊಟ್ಟಿತು.

ಕೊನೆಯದಾಗಿ ಮಾನ್ಯ ಕುಲಪತಿಗಳು ಇಂದಿನ ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ, ತಮ್ಮ ಅಮೂಲ್ಯ ಸಲಹೆ-ಸಹಕಾರಗಳನ್ನು ನೀಡಿದ ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/- | ಸಹಿ/- |
| ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು | ಕುಲಪತಿಗಳು ಹಾಗೂ ಅಧ್ಯಕ್ಷರು |